**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2016-17ನೇ ಸಾಲಿನ ಪ್ರತಿ ಜಿಲ್ಲಾ ಪಂಚಾಯತಿಗಳಿಗೆ ಜನಸಂಖ್ಯೆ ಅನುಗುಣವಾಗಿ ಜಿಲ್ಲಾ ಪಂಚಾಯತ್ ಅಭಿವೃದ್ಧಿ (ಶಾಸನಬದ್ಧ ಹೆಚ್ಚುವರಿ) ಅನುದಾನದ 3ನೇ ಕಂತನ್ನು ಒದಗಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2013, ದಿನಾಂಕ: 17-07-2013.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 73 ಜಿಪಸ 2015(ಪಿ-1), ದಿನಾಂಕ: 25-05-2016.
3. ಸರ್ಕಾರದ ಸಮ ಸಂಖ್ಯೆಯ ಆದೇಶ ದಿನಾಂಕ:27-05-2016.
4. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 73 ಜಿಪಸ 2015(ಪಿ-1), ದಿನಾಂಕ: 02-09-2016.
5. ಸರ್ಕಾರದ ಸಮ ಸಂಖ್ಯೆಯ ಆದೇಶ ದಿನಾಂಕ:03-09-2016.
6. ಸರ್ಕಾರದ ಸಮ ಸಂಖ್ಯೆಯ ತಿದ್ದೋಲೆ ದಿನಾಂಕ:20-09-2016.

ಪ್ರಸ್ತಾವನೆ:

ಜಿಲ್ಲಾ ಪಂಚಾಯತಿಗಳಿಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಜನಸಂಖ್ಯೆಗನುಗುಣವಾಗಿ ಅಭಿವೃದ್ಧಿ ಅನುದಾನ (ಶಾಸನಬದ್ಧ ಹೆಚ್ಚುವರಿ ಅನುದಾನ)ವನ್ನು ನೀಡಲು ನಿರ್ಧರಿಸಿರುವಂತೆ ಲೆಕ್ಕ ಶೀರ್ಷಿಕೆ:2515-00-101-0-31-050 ಲಿಂಕ್ ಕೋಡ್ ಲೆಕ್ಕ ಶೀರ್ಷಿಕೆ:2515-00-196-1-22-300 (ಯೋಜನೆ)ರಡಿ ರೂ.8000.00 ಲಕ್ಷ ಆಯವ್ಯಯ ಒದಗಿಸಲಾಗಿರುತ್ತದೆ.

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಜಿಲ್ಲಾ ಪಂಚಾಯತಿಗೆ ಒದಗಿಸಿರುವ ಅಭಿವೃದ್ಧಿ ಅನುದಾನದಲ್ಲಿ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವ ಬಗ್ಗೆ ಸವಿವರವಾಗಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಓದಲಾದ (3)ರ ಆದೇಶದ ಮೂಲಕ 2016-17ನೇ ಸಾಲಿನ 1ನೇ ಕಂತಿನ ಅನುದಾನ ರೂ.2125.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಮುಂದುವರೆದು, ಓದಲಾದ(5)ರ ಆದೇಶದ ಮೂಲಕ 2016-17ನೇ ಸಾಲಿನ 2ನೇ ಕಂತಿನ ಅನುದಾನ ರೂ.2125.00 ಲಕ್ಷಗಳನ್ನು ಈಗಾಗಲೇ ಬಿಡುಗಡೆಗೊಳಿಸಲಾಗಿದೆ.

2016-17ನೇ ಸಾಲಿನ ಮೂರನೇ ತ್ರೈಮಾಸಿಕ ಅನುದಾನ ರೂ.2125.00 ಲಕ್ಷಗಳನ್ನು (ಎರಡು ಸಾವಿರದ ಒಂದುನೂರ ಇಪ್ಪತ್ತೈದು ಲಕ್ಷ ರೂಪಾಯಿಗಳು) ಮಾತ್ರ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:140:ಜಿಪಸ:2016 ಬೆಂಗಳೂರು ದಿನಾಂಕ:08-11-2016**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ :2515-00-101-0-31-050 ರಡಿಯಲ್ಲಿ ಲಿಂಕ್ ಡಾಕ್ಯುಮೆಂಟ್ 2515-00-196-1-22-300(ಯೋಜನೆ) ಪ್ರತಿ ಜಿಲ್ಲಾ ಪಂಚಾಯತ್ ಅಭಿವೃದ್ಧಿ (ಶಾಸನಬದ್ಧ ಹೆಚ್ಚುವರಿ) ಅನುದಾನ ರೂ.8000.00 ಲಕ್ಷದಲ್ಲಿ ಒಟ್ಟು 30 ಜಿಲ್ಲಾ ಪಂಚಾಯತ್‌ಗಳಿಗೆ 3ನೇ ತ್ರೈಮಾಸಿಕ ಕಂತಾಗಿ ರೂ.2125.00 (ಎರಡು ಸಾವಿರದ ಒಂದುನೂರ ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಬಿಡುಗಡೆಗೊಳಿಸಲಾಗಿದೆ.

ದಿನಾಂಕ:17.07.2013ರ ಸರ್ಕಾರಿ ಆದೇಶ ಸಂಖ್ಯೆ :ಗ್ರಾಅಪ 75 ಜಿಪಸ 2013ರಲ್ಲಿಯ ಮಾರ್ಗಸೂಚಿಯನ್ವಯ ಕಡ್ಡಾಯವಾಗಿ 2016-17ನೇ ಸಾಲಿನ ಕ್ರಿಯಾ ಯೋಜನೆಯನ್ನು ತಯಾರಿಸಿ, ಯೋಜನೆಯನ್ನು ಅನುಷ್ಠಾನಗೊಳಿಸುವುದು. ಈ ಹಿಂದೆ ನೀಡಿರುವ ಮಾರ್ಗಸೂಚಿಗಳನ್ನು ಮುಂದುವರೆಸುತ್ತಾ, ಈ ಕೆಳಕಂಡ ಷರತ್ತುಗಳನ್ನು ಸಹ ಹೊರಡಿಸಿದೆ.

2016-17ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ವಾರ್ಷಿಕ ಆಯವ್ಯಯ ರೂ.8000.00 ಲಕ್ಷಗಳನ್ನು ಒದಗಿಸಲಾಗಿದೆ. ಈ ಅನುದಾನಕ್ಕೆ ಜಿಲ್ಲಾ ಪಂಚಾಯತಿಗಳು ಮಾರ್ಗಸೂಚಿಯನ್ವಯ ಗ್ರಾಮ ಸಭೆಗಳ ಶಿಫಾರಸ್ಸಿನ ಕ್ರಿಯಾ ಯೋಜನೆಯನ್ನು ತಯಾರಿಸಿ, ಜಿಲ್ಲಾ ಪಂಚಾಯತಿಯ ಅನುಮೋದನೆ ಪಡೆದು ಚಾಲ್ತಿಯಲ್ಲಿರುವ ನಿಯಮಗಳಡಿಯಲ್ಲಿ ಹಾಗೂ ಕರ್ನಾಟಕ ಪಂ.ರಾಜ್ ಅಧಿನಿಯಮ, 1993 ರಲ್ಲಿ ಉಲ್ಲೇಖಿಸಿರುವ ನಿಯಮಗಳನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

- ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ 75 ಜಿಪಸ 2013, ದಿನಾಂಕ:17-07-2013ರಲ್ಲಿ ಸೂಚಿಸಿದಂತೆ ಮತ್ತೊಮ್ಮೆ ಈ ಕೆಳಕಂಡಂತೆ ವಿವರಿಸಿದೆ.

1. ವಾರ್ಷಿಕ ಹಂಚಿಕೆಯಾಗಿರುವ ಅನುದಾನದಲ್ಲಿ ಜಿಲ್ಲಾ ಪಂಚಾಯತಿಯು ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಹಾಗೂ ಅದರ ಅನುಮೋದನೆಯನ್ನು ನೀಡುವುದು.
2. ಈ ಅಭಿವೃದ್ಧಿ ಯೋಜನೆಯು, ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು. ಪ್ರತ್ಯೇಕವಾಗಿ ಅನುದಾನದ ಕಂತುವಾರು ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಪ್ರತಿಬಂಧಿಸಲಾಗಿದೆ.
3. ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನದಲ್ಲಿ ತಯಾರಿಸುವ ಅಭಿವೃದ್ಧಿ ಯೋಜನೆಗಳಲ್ಲಿ ದೀರ್ಘಕಾಲಿಕ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಕಾಯ್ದಿರಿಸುವುದು.
4. ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಠಿಕಾಂಶ, ಶಾಲಾ ಅಭಿವೃದ್ಧಿ ಮುಂತಾದ ಯೋಜನೆಗಳಲ್ಲಿ ಅಳವಡಿಸಿಕೊಳ್ಳುವುದು.
5. ಗ್ರಾಮೀಣ ರಸ್ತೆಗಳ ನಿರ್ಮಾಣ ಮತ್ತು ಉನ್ನತೀಕರಣಕ್ಕಾಗಿ ಒಟ್ಟಾರೆ ಅನುದಾನದ ಶೇ 20 ರಷ್ಟು ಮೀರದಂತೆ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.
6. ಅಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಯೋಜನೆಗಳಿಗೆ ಅವಶ್ಯಕತೆ ಇರುವ ಅನುದಾನವನ್ನು ಕಾಯ್ದಿರಿಸುವುದು.
7. ಈ ಕ್ರಿಯಾ ಯೋಜನೆಯು ಜಿಲ್ಲಾ ಕ್ರಿಯಾ ಯೋಜನೆಯ ಭಾಗವಾಗಿರಬೇಕು ಹಾಗೂ ಪ್ಲಾನ್-ಪ್ಲಸ್ ತಂತ್ರಾಂಶದಲ್ಲಿ ಕ್ರಿಯಾ ಯೋಜನೆಯನ್ನು ಅಪ್‌ಲೋಡ್ ಮಾಡುವುದು.
8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕನಿಷ್ಠ ಶೇ.25 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
9. ವಿಕಲಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ.3 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
10. ಲಿಂಗಾಧಾರಿತ ಆಯವ್ಯಯ ತಯಾರಿಸಿ ಅನುಷ್ಠಾನಗೊಳಿಸುವುದು.
11. ಜಿಲ್ಲಾ ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆ ಅನುಮೋದನೆಯನ್ನು ಪಡೆಯುವುದು ಕಡ್ಡಾಯಗೊಳಿಸಿದೆ.
12. ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗಿ ಅನುಮೋದನೆ ಗೊಂಡಿರುವ ಗ್ರಾಮ ಪಂಚಾಯತಿವಾರು ಕ್ರಿಯಾ ಯೋಜನೆಗಳನ್ನು ಸಂಬಂಧ ಪಟ್ಟ ಗ್ರಾಮ ಪಂಚಾಯತಿಗಳ ಗ್ರಾಮ ಸಭೆಯಲ್ಲಿ ಮಾಹಿತಿಗಾಗಿ ಮಂಡಿಸುವುದು.
13. ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.
14. ಅಭಿವೃದ್ಧಿ ಯೋಜನೆಯ ಪ್ರಗತಿಯನ್ನು ಎರಡು ತಿಂಗಳಿಗೊಮ್ಮೆ ನಡೆಯುವ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪರಾಮರ್ಶೆ ನಡೆಸುವುದು.
15. ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವಾಗ ಯೋಜನೆ ಪ್ರಾರಂಭಗೊಳ್ಳುವ ಪೂರ್ವದ ಪರಿಸ್ಥಿತಿ, ಅನುಷ್ಠಾನಗೊಳಿಸುತ್ತಿರುವಾಗ ಇರುವ ಪರಿಸ್ಥಿತಿ, ಪೂರ್ಣಗೊಂಡ ನಂತರದ ಪರಿಸ್ಥಿತಿಯ ಪೂರ್ಣ ವರದಿ, ಅಗತ್ಯ ಛಾಯಾಚಿತ್ರದೊಂದಿಗೆ ದಾಖಲೀಕರಿಸುವುದು. ಈ ರೀತಿ ದಾಖಲೀಕರಿಸಿದ ದಾಖಲೆಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.
16. ಅನುಮೋದಿತ ಯೋಜನೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದರ ಜೊತೆಗೆ ವರ್ಕ್‌ಸಾಫ್ಟ್ ತಂತ್ರಾಂಶದಲ್ಲಿಯೂ ಸಹ ಪ್ರತಿ ಕಾಮಗಾರಿಯ ವಿವರಗಳನ್ನು ಹಂತವಾರು ದಾಖಲಿಸಬೇಕು.
17. ಪ್ರಗತಿ ವರದಿಯನ್ನು ಹಾಗೂ ಹಣ ಬಳಕೆ ಪ್ರಮಾಣ ಪತ್ರವನ್ನು ಪಂಚತಂತ್ರ ತಂತ್ರಾಂಶದಲ್ಲಿ ಮಾಹೆವಾರು ಕಡ್ಡಾಯವಾಗಿ ಅಳವಡಿಸುವುದು.
18. ಈ ಅನುದಾನದ ಕ್ರಿಯಾ ಯೋಜನೆಯು ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗೂ ಕ್ರೋಢೀಕೃತ ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 256, 258 ಹಾಗೂ ಅದರಡಿಯಲ್ಲಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳು, 1996ಕ್ಕೆ ಅನುಸಾರವಾಗಿ ಸಿದ್ಧಪಡಿಸಬೇಕು).

19. ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ ಸಕ್ಷಮ ಪ್ರಾಧಿಕಾರಿಗಳಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಅನುಷ್ಠಾನಗೊಳಿಸಬೇಕು.
20. ಈ ಯೋಜನೆಯಲ್ಲಿ ಕೈಗೊಳ್ಳಲಾದ ಪ್ರತಿಯೊಂದು ಕಾಮಗಾರಿಗಳು ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತದೆ.

**ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನದಲ್ಲಿ ನಿಷೇಧಿತ ಕಾಮಗಾರಿಗಳು/ಕಾರ್ಯಗಳು:**

1. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಥವಾ ವೈಯುಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದನ್ನು ಅಥವಾ ಕಟ್ಟಡಗಳನ್ನು ನಿರ್ಮಿಸುವುದನ್ನು;
2. ಧಾರ್ಮಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದನ್ನು ಹಾಗೂ ಆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಟ್ಟಡ ಅಥವಾ ಇತರ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು;
3. ವೈಯುಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವಾ ಸಾಲ ನೀಡುವುದನ್ನು;
4. ಕಚೇರಿಯ ಆವರ್ತಕ ವೆಚ್ಚ, ಸಿಬ್ಬಂದಿ ವೇತನ ಭರಿಸುವುದು.;
5. ಕಚೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದನ್ನು;
6. ಸಾದಿಲ್ವಾರು ವೆಚ್ಚ ಮಾಡುವುದನ್ನು;
7. ವಾಹನಗಳ ಖರೀದಿ, ದುರಸ್ತಿ, ಇಂಧನ ವೆಚ್ಚ ಅಥವಾ ಬಾಡಿಗೆ ಮೇಲೆ ವಾಹನಗಳನ್ನು ಕಚೇರಿ ಕಾರ್ಯಕ್ಕಾಗಿ ಪಡೆಯುವುದನ್ನು;
8. ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದನ್ನು ;
9. ಬ್ಯಾಂಕಿನಿಂದ ಸ್ವಂತಕ್ಕೆ ಹಣ ಸೆಳೆಯುವ ಪ್ರಕ್ರಿಯೆ (ಇದನ್ನು ಉಲ್ಲಂಘಿಸಿದಲ್ಲಿ ಬ್ಯಾಂಕಿನಿಂದ ಹಣ ಸೆಳೆಯುವ ಅಧಿಕಾರಿ ಹಾಗೂ ಪಂ.ರಾಜ್ ಸಂಸ್ಥೆಯ ಪ್ರತಿನಿಧಿಗಳು ಆ ರೀತಿ ಸೆಳೆದ ಮೊತ್ತವನ್ನು ಶೇ.15ರ ಬಡ್ಡಿ ಮೊತ್ತದೊಂದಿಗೆ ಮರುಪಾವತಿ ಮಾಡುವುದರ ಜೊತೆಗೆ ಶಿಸ್ತುಕ್ರಮ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು)
10. ಈ ಅನುದಾನವನ್ನು ಯಾವುದೇ ಕಾರಣಕ್ಕೂ ಚುನಾಯಿತ ಪ್ರತಿನಿಧಿಗಳ ಉಪವೇಶನ ಶುಲ್ಕ, ಗೌರವಧನಕ್ಕಾಗಿ ಬಳಸುವುದನ್ನು ನಿಷೇಧಿಸಲಾಗಿದೆ.
11. ಈ ಅನುದಾನದಡಿಯಲ್ಲಿ ಯಾವುದೇ ರೀತಿಯ ಪ್ರವಾಸ ಕಾರ್ಯಕ್ರಮಗಳಿಗಾಗಿ (exposure visits, study tours) ಅನುದಾನವನ್ನು ಬಳಸುವುದನ್ನು ನಿಷೇಧಿಸಲಾಗಿದೆ.
12. ಯಾವುದೇ ಕಚೇರಿ ಕಟ್ಟಡಗಳ ನಿರ್ಮಾಣ ಕೈಗೊಳ್ಳುವುದನ್ನು ನಿಷೇಧಿಸಲಾಗಿದೆ. ಉದಾ: ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ಕಛೇರಿ ಕಟ್ಟಡಗಳು.
13. ಜಿಲ್ಲಾ ಪಂಚಾಯತಿ ಸದಸ್ಯವಾರು ಅನುದಾನ ಹಂಚಿಕೆ ಮಾಡುವುದನ್ನು ನಿಷೇಧಿಸಲಾಗಿದೆ.
14. ಯಾವುದೇ ತಂತ್ರಾಂಶ ತಯಾರಿಸಲು ಅನುದಾನವನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ.

- ಈ ಅನುದಾನದಲ್ಲಿ ಕೈಗೊಳ್ಳುವ ಎಲ್ಲಾ ಯೋಜನೆಗಳನ್ನು ಕಡ್ಡಾಯವಾಗಿ Worksoft ತಂತ್ರಾಂಶದಲ್ಲಿ ಅಳವಡಿಸುವುದು.
- ಆರ್ಥಿಕ ಮತ್ತು ಭೌತಿಕ ಪ್ರಗತಿ ವರದಿಯನ್ನು ಪ್ರತಿ ತಿಂಗಳ 7ನೇ ತಾರೀಖಿನೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
- ಹಣ ಬಳಕೆ ಪ್ರಮಾಣ ಪತ್ರಗಳನ್ನು ಸರ್ಕಾರಕ್ಕೆ ಮುಖ್ಯ ಲೆಕ್ಕಾಧಿಕಾರಿಗಳು ಹಾಗು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದೃಡೀಕರಿಸಿ ಸಲ್ಲಿಸುವುದು.
- 2015-16ನೇ ಸಾಲಿನಲ್ಲಿ ಯೋಜನೆಯಲ್ಲಿ ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳ ಯಶೋಗಾಥೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.
- **2015-16ನೇ ಸಾಲಿನ ಉಪಯುಕ್ತತೆ ಪ್ರಮಾಣ ಪತ್ರ ಇದರೊಂದಿಗೆ Non diversion, Non-embezzlement certificate ಕಡ್ಡಾಯವಾಗಿ ಸಲ್ಲಿಸುವುದು ಹಾಗೂ ಮಾರ್ಗಸೂಚಿಯನ್ವಯ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ ಎಂಬುದಾಗಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು ದೃಢೀಕರಿಸಿ ಸಲ್ಲಿಸತಕ್ಕದ್ದು. ಸದರಿ ಅನುದಾನಕ್ಕೆ ಎಸ್.ಸಿ.ಪಿ/ಎಸ್.ಟಿ.ಪಿ ಕಾಮಗಾರಿಗಳಿಗೆ ಪ್ರತ್ಯೇಕ ಗುರಿ ನಿಗಧಿಪಡಿಸಿದ್ದು, ಅದರ ಪ್ರಗತಿ ವರದಿಗಳನ್ನು ಮಾಹೆವಾರು ನಿಗಧಿತ ನಮೂನೆಯಲ್ಲಿ ತಪ್ಪದೆ ಸಲ್ಲಿಸುವುದು.**

ಈ ಅನುದಾನವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್.ಡಿ 03 ಟಿ.ಎಫ್.ಪಿ 2016 ದಿನಾಂಕ:02.04.2016ರಲ್ಲಿ ತಿಳಿಸಿದಂತೆ ಆಯಾ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರದತ್ತಗೊಳಿಸಲಾಗಿರುವ ಅಧಿಕಾರದನ್ವಯ ಬಿಡುಗಡೆಗೊಳಿಸಲು ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

8/11/2016

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

8.11.16

ಗೆ:

1. ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ&ಆರ್‌ಎಸ್‌ಎ), ಕರ್ನಾಟಕ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ
5. **ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುತ್ತಾ, ಉಲ್ಲೇಖ(4)ರ ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 73 ಜಿಪಸ 2015(ಪಿ-1)ರ ದಿನಾಂಕ: 02.09.2016ತಿಳಿಸಿರುವಂತೆ 2016-17ನೇ ಸಾಲಿನ ಕ್ರಿಯಾ ಯೋಜನೆಗೆ ಸಂಬಂಧಪಟ್ಟಂತೆ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಶೀಘ್ರದಲ್ಲಿ ಕಡ್ಡಾಯವಾಗಿ ಸಲ್ಲಿಸಲು ತಿಳಿಸಿದೆ.**
6. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು,
7. ವಿಶೇಷಾಧಿಕಾರಿಗಳು (ಜಿ.ಪಂ) ಆರ್ಥಿಕ ಇಲಾಖೆ
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ. ಇಲಾಖೆ
9. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜ ಭವನ, ಬೆಂಗಳೂರು.
10. ಸಂಬಂಧಪಟ್ಟ ಜಿಲ್ಲಾ ಖಜಾನೆ ಅಧಿಕಾರಿಗಳು
11. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಕಂಪ್ಯೂಟರ್ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

ಪ್ರತಿಯನ್ನು:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳಿಗೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

# ಅನುಬಂಧ

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 140 ಜಿಪಸ 2016, ದಿನಾಂಕ: 08-11-2016**

(ರೂ.ಗಳಲ್ಲಿ)

| ಕ್ರ.ಸಂ | ಜಿಲ್ಲಾ ಪಂಚಾಯತಿಗಳ ಹೆಸರು | ಒಂದನೇ ಕಂತಿನ ಅನುದಾನ | ಎರಡನೇ ಕಂತಿನ ಅನುದಾನ | ಮೂರನೇ ಕಂತಿನ ಅನುದಾನ |
|---|---|---|---|---|
| 1. | ಬಾಗಲಕೋಟೆ | 71,98,665 | 71,98,665 | 71,98,665 |
| 2 | ಬೆಂಗಳೂರು(ಗ್ರಾ) | 56,68,024 | 56,68,024 | 56,68,024 |
| 3 | ಬೆಂಗಳೂರು(ನಗರ) | 60,69,480 | 60,69,480 | 60,69,480 |
| 4 | ಬೆಳಗಾವಿ | 1,33,14,924 | 1,33,14,924 | 1,33,14,924 |
| 5 | ಬಳ್ಳಾರಿ | 78,44,664 | 78,44,664 | 78,44,664 |
| 6 | ಬೀದರ್ | 71,59,553 | 71,59,553 | 71,59,553 |
| 7 | ವಿಜಯಪುರ | 82,28,843 | 82,28,843 | 82,28,843 |
| 8 | ಚಾಮರಾಜನಗರ | 60,00,192 | 60,00,192 | 60,00,192 |
| 9 | ಚಿಕ್ಕಬಳ್ಳಾಪುರ | 63,44,531 | 63,44,531 | 63,44,531 |
| 10 | ಚಿಕ್ಕಮಗಳೂರು | 61,41,605 | 61,41,605 | 61,41,605 |
| 11 | ಚಿತ್ರದುರ್ಗ | 73,00,802 | 73,00,802 | 73,00,802 |
| 12 | ದಕ್ಷಿಣ ಕನ್ನಡ | 66,65,792 | 66,65,792 | 66,65,792 |
| 13 | ದಾವಣಗೆರೆ | 72,64,705 | 72,64,705 | 72,64,705 |
| 14 | ಧಾರವಾಡ | 58,70,341 | 58,70,341 | 58,70,341 |
| 15 | ಗದಗ್ | 55,68,839 | 55,68,839 | 55,68,839 |
| 16 | ಕಲಬುರಗಿ | 83,77,741 | 83,77,741 | 83,77,741 |
| 17 | ಹಾಸನ | 74,88,154 | 74,88,154 | 74,88,154 |
| 18 | ಹಾವೇರಿ | 70,65,035 | 70,65,035 | 70,65,035 |
| 19 | ಕೊಡಗು | 50,00,000 | 50,00,000 | 50,00,000 |
| 20 | ಕೋಲಾರ | 65,65,756 | 65,65,756 | 65,65,756 |
| 21 | ಕೊಪ್ಪಳ | 68,34,117 | 68,34,117 | 68,34,117 |
| 22 | ಮಂಡ್ಯ | 77,50,769 | 77,50,769 | 77,50,769 |
| 23 | ಮೈಸೂರು | 84,44,742 | 84,44,742 | 84,44,742 |
| 24 | ರಾಯಚೂರು | 75,92,411 | 75,92,411 | 75,92,411 |
| 25 | ರಾಮನಗರ | 59,17,068 | 59,17,068 | 59,17,068 |
| 26 | ಶಿವಮೊಗ್ಗ | 67,61,068 | 67,61,068 | 67,61,068 |
| 27 | ತುಮಕೂರು | 93,15,713 | 93,15,713 | 93,15,713 |
| 28 | ಉತ್ತರ ಕನ್ನಡ | 59,93,430 | 59,93,430 | 59,93,430 |
| 29 | ಉಡುಪಿ | 64,63,288 | 64,63,288 | 64,63,288 |
| 30 | ಯಾದಗಿರಿ | 62,89,748 | 62,89,748 | 62,89,748 |
| | | **21,25,00,000** | **21,25,00,000** | **21,25,00,000** |

8/11/2016

Under Secretary to Govt. (ZP)
Rural Devt. & Pan. Raj Dept
Karnataka Govt. Secretariat